# ಮಳೆ ಕೋಗಿಲೆ



■ ಚಿತ್ರ– ಬರಹ: **ಪುಟ್ಟರಾಜು ಕೈಗಾ**

**ಕು**ವೆಂಪುರವರ ಕಾವ್ಯ ರಸ ಜೀವನಕ್ಕೆ ಪುಷ್ಟಿ ಒದಗಿಸಿದ ಅಗಾಧ ಜೀವ ವೈವಿಧ್ಯಗಳಲ್ಲಿ ಇದೂ ಒಂದು. ವರ್ಷ ಋತುವಿನಲ್ಲೂ ಕೋಗಿಲೆ ಕೂಗುತ್ತಿದೆಯೆಂದರೆ ಅದು ಮಳೆಕೋಗಿಲೆಯೇ. ಅರ್ಥಾತ್, ಬೂದ್ ಕಿತ್ತೋಳೆ ಪಕ್ಷಿ, ಮಲೆ ಮಂಗಟ್ಟೆ ಅಥವಾ ಬೂದು ಮಂಗಟ್ಟೆ. ಇಂಗ್ಲಿಷ್‌ನಲ್ಲಿ ಇದರ ಹೆಸರು **Malabar Grey Hornbill.**

ದೊಡ್ಡದಾದ ಧ್ವನಿಯಲ್ಲಿ ಚಿಕ್ಕ ಮಗು ಅತ್ತಂತೆ ಕೂಗುವ ಇದನ್ನು ರಾಷ್ಟ್ರಕವಿ ಕುವೆಂಪುರವರು ‘ಮಳೆ ಕೋಗಿಲೆ’ ಎಂದು ಕರೆದರು. ಅದು ಅವರ ಕವಿತೆಗಳಿಗೆ ಸ್ಫೂರ್ತಿ ಕೂಡ. ಪಶ್ಚಿಮ ಘಟ್ಟದಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರಕೃತಿಪ್ರಿಯರಿಗೂ ‘ಧೋ’ ಎಂದು ಸುರಿಯುವ ಮಳೆಯಲ್ಲೂ ಈ ಮಳೆ ಕೋಗಿಲೆಯ ದನಿ ಕೇಳಿಸುತ್ತದೆ. ತಮ್ಮ ಬಾಲ್ಯದ ದಿನದಿಂದಲೂ ಚಿಕ್ಕಮಗಳೂರಿನ ಕೊಪ್ಪ ತಾಲ್ಲೂಕಿನ ಹಿರಿಕೊಡಿಗೆಯ ಅಜ್ಜನ ಮನೆಯ ಕಾಡಿನಲ್ಲಿ ಮತ್ತು ತೀರ್ಥಹಳ್ಳಿಯ ತುಂಗಾ ನದಿಗೆ ಹತ್ತಿರವಿರುವ ಗುಡ್ಡ ಬೆಟ್ಟಗಳ ನಡುವಣ ಕುಪ್ಪಳಿಯಲ್ಲಿ ಕಂಡ ಈ ಮಲೆ ಮಂಗಟ್ಟೆ ಹಕ್ಕಿ ಅವರ ಕವಿತೆ ‘ಮಳೆ ಕೋಗಿಲೆಗೆ’ ಪ್ರೇರಕವಾದದ್ದು ಸಹಜವೇ.

ದಟ್ಟಬೂದು ಬಣ್ಣದ ಮುಖದಲ್ಲಿ ತಲೆಗಿಂತ ದೊಡ್ಡದಾಗಿ ಎದ್ದು ಕಾಣುವ ಕೊಕ್ಕು ಹೊಂದಿರುವ ದೊಡ್ಡಗಾತ್ರದ ಹಕ್ಕಿಯಿದು. ಈ ದೊಡ್ಡ ಕೋಡುಗಳು ಅವುಗಳ ಧ್ವನಿಯನ್ನು ಒಂದಷ್ಟು ಪಟ್ಟು ಹೆಚ್ಚಿಸುವುದು ಬಿಟ್ಟರೆ ಬೇರೇನೂ ಉಪಯೋಗವಿಲ್ಲ. ಈ ಹಕ್ಕಿಗೆ ಇತರ **hornbill** ಗಳಿಗೆ ಇರುವಂತೆ ಕೊಕ್ಕಿನ ಮೇಲೊಂದು ಕೊಂಬು ಇರುವುದಿಲ್ಲ. ಬಾಲದ ಪುಕ್ಕಗಳು ಉದ್ದವಾಗಿದ್ದು ತುದಿಯಲ್ಲಿ ಬಿಳಿ ಅಂಚು ಇದೆ.

ಗಂಡು ಹಕ್ಕಿ ಸುಂದರವಾದ ಕಿತ್ತಳೆ ಹಳದಿ ಬಣ್ಣದ ಪಾರದರ್ಶಕ (ಬೆಳಕು ಹೊರಚೆಲ್ಲುವಂತಹ) ಕೊಕ್ಕನ್ನು ಮತ್ತು ತಿಳಿ ಹವಳದ ಬಣ್ಣದ ಕಣ್ಣುಗಳನ್ನು ಹೊಂದಿದೆ. ಹೆಣ್ಣು ಹಕ್ಕಿ ಹಳದಿ ಬಣ್ಣದ ಕೊಕ್ಕನ್ನು ಮತ್ತು ತಿಳಿ ಬೂದು ಮಿಶ್ರಿತ ಬಿಳಿ ಕಣ್ಣುಗಳನ್ನು ಹೊಂದಿದೆ. ಬೂದು ಮಿಶ್ರಿತ ಬಿಳಿ ಗೆರೆಗಳು ತಲೆಯ ಮೇಲೆ ಮತ್ತು ಕುತ್ತಿಗೆಯಲ್ಲಿ ಎದ್ದು ಕಾಣುತ್ತವೆ. ಬಿಳಿಯ ಹುಬ್ಬು ಮತ್ತು ದಾಲ್ಚಿಣಿ ಬಣ್ಣದ ಕೆಳಹೊಟ್ಟೆ ತುದಿ, ಕಣ್ಣಿನ ಸುತ್ತ ನಗ್ನ ಚರ್ಮ, ಅಗಲವಾದ ದೊಡ್ಡ ರೆಕ್ಕೆಗಳು. ಉದ್ದನೆಯ ದೇಹಕ್ಕೆ ಭಾರವೇನೋ ಎನ್ನಿಸುವಂತಹ ಬಾಲ.

ಆಯುಷ್ಯದ ಹೆಚ್ಚಿನ ವೇಳೆಯನ್ನು ಈ ಹಕ್ಕಿ ಮರದ ಮೇಲೆಯೇ ಕಳೆಯುತ್ತದೆ. ಅದರಲ್ಲೂ ಅಂಜೂರದ ಜಾತಿಯ ಕಾಡುಮರದ ಹಣ್ಣುಗಳೆಂದರೆ ಎಲ್ಲಿಲ್ಲದ ಪ್ರೀತಿ. ಅತ್ತಿ ಆಲ, ಬಸರೀ ಮತ್ತು ದೂಪದ ಮರದ ಹಣ್ಣುಗಳನ್ನೂ ಹೆಚ್ಚು ಇಷ್ಟ ಪಡುತ್ತವೆ. ಸದಾ ಹಸಿರು, ತೇವಭರಿತ, ಉದುರೆಲೆ ಕಾಡು ಅಥವಾ ಎಸ್ಟೇಟ್‌ಗಳ ಬಳಿ ತೆರಳಿದರೆ ಇವುಗಳ ಛಾಯಾಗ್ರಹಣ ಮಾಡುವುದು ಸುಲಭ. ಏಕೆಂದರೆ ಇವುಗಳ ವಾಸ ಅಲ್ಲಿಯೇ.

ವಂಶಾಭಿವೃದ್ಧಿಯ ಸಮಯದಲ್ಲಿ ಹಣ್ಣುಗಳ ಜತೆಗೆ ಹಲವಾರು ಕೀಟಗಳು, ಓತಿಕ್ಯಾತ, ಇಲಿ ಮತ್ತು ಇತರ ಸರೀಸೃಪಗಳನ್ನೂ ಈ ಹಕ್ಕಿ ತಿನ್ನುತ್ತದೆ. **Ocyceros griseus** ಎಂಬ ವೈಜ್ಞಾನಿಕ ಹೆಸರಿನ ಈ ಹಕ್ಕಿ ಪಶ್ಚಿಮ ಘಟ್ಟದಲ್ಲಷ್ಟೇ ಕಾಣಸಿಗುತ್ತದೆ. **IUCN** ಪ್ರಕಾರ ಇದು **Endemic species** ಎಂಬ ವರ್ಗಕ್ಕೆ ಸೇರಿದೆ.

ಮಾರ್ಚ್ ತಿಂಗಳಿಂದ ಜೂನ್‌ವರೆಗೂ ಮರದ ಪೊಟರೆಯಲ್ಲಿ ಗೂಡುಕಟ್ಟುವ ಗಂಡು ಹಕ್ಕಿ, ಬಾಣಂತಿ ಹಕ್ಕಿಯನ್ನು ಗೂಡಿನ ಒಳಗೆ ಕುಳ್ಳಿರಿಸಿ ಬರಿಯ ಕೊಕ್ಕು ಹೊರಗೆ ಕಾಣುವಂತೆ ಸುತ್ತಲೂ ಮಣ್ಣು ಮತ್ತು ಹಿಕ್ಕೆಯನ್ನು ಮಿಶ್ರಣ ಮಾಡಿ ಮೆತ್ತಿ ಮುಚ್ಚಿಬಿಡುತ್ತದೆ. ಅಲ್ಲಿಂದ ಮೊಟ್ಟೆ ಒಡೆದು ಮರಿಗಳು ದೊಡ್ಡದಾಗುವರೆಗೆ ಇಡೀ ಸಂಸಾರಕ್ಕೆ (ಹೆಂಡತಿ ಮತ್ತು ಮರಿಗಳಿಗೆ) ಆಹಾರ ಒದಗಿಸುವ ಭಾರವನ್ನು ಗಂಡು ಹಕ್ಕಿಯೇ ಹೊರುತ್ತದೆ. ಈ ಸಮಯದಲ್ಲಿಗಂಡು ಹಕ್ಕಿಯನ್ನು ಯಾರಾದರೂ ಕೊಂದರೆ ಅಥವಾ ಅಪಾಯ ಸಂಭವಿಸಿದರೆ, ಇಡೀ ಕುಟುಂಬವೇ ನಾಶವಾಗುವ ದುರಂತ ಇದರದ್ದು.

ಪಶ್ಚಿಮ ಘಟ್ಟದ ಕೈಗಾ ಕಾಡಿನಲ್ಲಿ ಈ ಮಲೆ ಮಂಗಟ್ಟೆ ಹಕ್ಕಿ ಅನಾಯಾಸವಾಗಿ ಎಲ್ಲರ ಕಣ್ಣಿಗೂ ಬೀಳುತ್ತದೆ. ಕೈಗಾ ವಸತಿ ಸಂಕೀರ್ಣದಲ್ಲಿ ಮಳೆಗಾಲದಲ್ಲಿ ಹಣ್ಣಾಗುವ ಸಾಕಷ್ಟು ಮರಗಳ ಪ್ರಭೇದಗಳಿದ್ದು, ಬೆಳಗಿನ ಜಾವ ಆಹಾರ ಹುಡುಕಿಕೊಂಡು ಈ ಮರಗಳಿಗೆ ದಾಳಿ ಇಡುತ್ತವೆ.